2) ಬೆಂಗಳೂರು ನಗರದ ಕೇಂದ್ರ ಕಾರಾಗೃಹವನ್ನು ನಗರದ ಹೊರ ವಲಯಕ್ಕೆ ಸ್ಥಳಾಂತರಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

3) ಪ್ರತಿಯೊಂದು ಜಿಲ್ಲೆಯಲ್ಲಿರುವ ಕಾರಾಗೃಹಗಳನ್ನು ಆಯಾ ಜಿಲ್ಲಾ ಸ್ಥಳದ ಹೊರವಲಯಕ್ಕೆ ಸ್ಥಳಾಂತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

1)-ಇಲ್ಲ

2) ನಗರದ ಹೊರವಲಯದ ಪರಪ್ಪನ ಅಗ್ರಹಾರದಲ್ಲಿ ನೂತನ ಕಾರಾಗೃಹ ನಿರ್ಮಾಣವಾಗುತ್ತಿದ್ದು ಈಗಾಗಲೇ ಭಾಗಶಃ ಕೇಂದ್ರ ಕಾರಾಗೃಹವನ್ನು ಸ್ಥಳಾಂತರಿಸಲಾಗಿದೆ

3) ಕಾರಾಗೃಹಗಳು ನ್ಯಾಯಾಲಯಗಳು ಮತ್ತು ಆಸ್ಪತ್ರೆಗಳ ಸಮೀಪದಲ್ಲಿರುವುದು ಅತ್ಯಾವಶ್ಯಕವಾಗಿದೆ. ಆದುದರಿಂದ, ಎಲ್ಲಾ ಕಾರಾಗೃಹಗಳನ್ನು ಹೊರವಲಯಕ್ಕೆ ಸ್ಥಳಾಂತರಿಸುವುದು ಸೂಕ್ತವಲ್ಲ.

ರಾಜ್ಯದಲ್ಲಿ ಏಕರೂಪದ ತೆರಿಗೆ ವಿಧಿಸುವ ಬಗ್ಗೆ

1382 (1744) ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) : ಮಾನ್ಯ ಹಣಕಾಸು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಏಕರೂಪದ ತೆರಿಗೆ ವಿಧಿಸುವುದರಿಂದ ಆಗುವ ಅನುಕೂಲ ಹಾಗೂ ಅನಾನುಕೂಲಗಳೇನು?

ಶ್ರೀ ಎಂ. ಶಿವಣ್ಣ (ಹಣಕಾಸು ರಾಜ್ಯ ಸಚಿವರು) :

ಅ) ಏಕರೂಪ ತೆರಿಗೆ (ನೆಲಮಟ್ಟದ ತೆರಿಗೆ) ಯನ್ನು ಜಾರಿಗೊಳಿಸುವುದರಿಂದ ; ರಾಜ್ಯಗಳ ನಡುವೆ ದರಗಳ ಬಗ್ಗೆ ಪೈಪೋಟಿಇರುವುದಿಲ್ಲ ; ರಾಜ್ಯ ರಾಜ್ಯಗಳ ನಡುವೆ ವ್ಯಾಪಾರ : ವಾಣಿಜ್ಯ ವಹಿವಾಟಿನ ಪಲ್ಲಟ ಆಗುವುದಿಲ್ಲ ; ಪ್ರತಿಯೊಂದು ರಾಜ್ಯದ ತೆರಿಗೆ ಮೂಲಗಳು ರಕ್ಷಿಸಲ್ಪಡುತ್ತದೆ;

ಏಕರೂಪ ತೆರಿಗೆ (ನೆಲಮಟ್ಟದ ತೆರಿಗೆ) ಯನ್ನು ಜಾರಿಗೆ ತರದಿದ್ದಲ್ಲಿ ವ್ಯಾಪಾರದ ಪಲಾಯನದ ಪರಿಣಾಮ ಉಂಟಾಗಬಹುದು. ತೆರಿಗೆ ದರದ ಬಗ್ಗೆ ಪೈಪೋಟಿ ಮುಂದುವರೆದು ಯಾವುದೇ ರಾಜ್ಯಗಳ ಹಿತದೃಷ್ಟಿಗೆ ದಕ್ಕೆ ಬರಬಹುದಾಗಿದೆ.

ರಾಜ್ಯದ ಅನುಮತಿ ಪಡೆದಿರುವ ವಿದ್ಯುತ್ ಯೋಜನೆಗಳ ಸಂಖ್ಯೆ

1387 (1597) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಈವರೆಗೆ ಎಷ್ಟು ವಿದ್ಯುತ್ ಯೋಜನೆಗಳಿಗೆ ಅನುಮತಿ ನೀಡಿದೆ? ಪ್ರಸ್ತುತ ಅವುಗಳು ಯಾವ ಹಂತದಲ್ಲಿವೆ?

ಆ) ಕೊಜೆಂಟ್ರಿಕ್ಸ್ ವಿದ್ಯುತ್ ಯೋಜನೆ ಕುರಿತಂತೆ ರಾಜ್ಯ ಸರ್ಕಾರವು ಕೈಗೊಂಡಿರುವ ಕ್ರಮವೇನು? ಹಾಗಿದ್ದಲ್ಲಿ, ಇದು ಪ್ರಸ್ತುತ ಯಾವ ಹಂತದಲ್ಲಿದೆ?

ಇ) ಕರ್ನಾಟಕ ಸರ್ಕಾರವು ರಚಿಸಿದ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದೆಯೇ? (ವಿವರ ಒದಗಿಸುವುದು).

ಈ) ಹೊಸ ವಿದ್ಯುತ್ ಯೋಜನೆಗಳಿಗೆ ಅನುಮತಿ ನೀಡುವ ಪ್ರಸ್ತಾವನೆಯು ರಾಜ್ಯ ಸರ್ಕಾರದ ಮುಂದಿದೆಯೇ?

ಶ್ರೀ ವೀರಕುಮಾರ್ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಕರ್ನಾಟಕ ಸರ್ಕಾರವು ಈವರೆಗೆ ನಾಲ್ಕು ಬಾರ್ಜ್ ಮೌಂಟೆಡ್ ವಿದ್ಯುತ್ ಯೋಜನೆಗಳಿಗೆ (ಬಿಡ್ ರೂಟ್), ಏಳು ಭೂ ಆಧಾರಿತ ಸಣ್ಣ ಬಹು ಇಂಧನ ವಿದ್ಯುತ್ ಯೋಜನೆಗಳಿಗೆ (ಬಿಡ್ ರೂಟ್) ಹಾಗೂ ಹದಿಮೂರು ಎಂ.ಓ.ಯು ಮೂಲದ ಯೋಜನೆಗಳಿಗೆ ಅನುಮತಿ ನೀಡಿದೆ. ಈ ಪೈಕಿ 260 ಮೆ.ವ್ಯಾ ಸಾಮರ್ಥ್ಯದ ಹೊಸ ಪೇಟೆ ಸಮೀಪದ ಜಿಂದಾಲ್ ಟ್ರಾಕ್ಟ್‌ಬಲ್ ವಿದ್ಯುತ್ ಯೋಜನೆಯು ಮುಂದುವರಿದ ಹಂತದಲ್ಲಿದ್ದು, 130 ಮೆ.ವ್ಯಾ. ಸಾಮರ್ಥ್ಯದ ಒಂದು ಘಟಕವು ಜನವರಿ 2000ದಿಂದ ಉತ್ಪಾದನೆಯನ್ನು ಪ್ರಾರಂಭಿಸಿದೆ ಹಾಗೂ ಮತ್ತೊಂದು ಘಟಕವು ಜೂನ್ 2000ದ ವೇಳೆಗೆ ಉತ್ಪಾದನೆ ಪ್ರಾರಂಭಿಸುವ ನೀರೀಕ್ಷೆ ಇದೆ. 27.8 ಮೆ.ವ್ಯಾ. ಸಾಮರ್ಥ್ಯದ ಬಳ್ಳಾರಿ ಸಮೀಪದ ಮೆ: ರಾಯಲಸೀಮೊ ವಿದ್ಯುತ್ ಯೋಜನೆಯು ಸಹ ಮುಂದುವರಿದ ಹಂತದಲ್ಲಿದೆ. ಪ್ರಸ್ತುತ ಈ ಯೋಜನೆಯ ಸಾಧನ ಸಲಕರಣೆಗಳ ನಿರ್ಮಾಣವು ಪ್ರಗತಿಯಲ್ಲಿದ್ದು, ಈ ಯೋಜನೆಯು ಏಪ್ರಿಲ್ 2000 ಅಂತ್ಯಕ್ಕೆ ಉತ್ಪಾದನೆ ಪ್ರಾರಂಭಿಸುವ ನಿರೀಕ್ಷೆ ಇದೆ.

ಮಂಗಳೂರು ಸಮೀಪದ ಮೆ: ತನ್ನೀರಭಾವಿ ಕಂ. ನೇತೃತ್ವದಲ್ಲಿ ನ್ಯಾಪ್ತಾ ಮೂಲದ 220 ಮೆ.ವ್ಯಾ. ಸಾಮರ್ಥ್ಯದ ವಿದ್ಯುತ್ ಯೋಜನೆಯ ನಿರ್ಮಾಣ ಕಾಮಗಾರಿಯು ಈಗಾಗಲೇ ಪ್ರಾರಂಭವಾಗಿದೆಯೆಂದು ವರದಿಯಾಗಿದೆ. ಅಲ್ಲದೆ, ಎಫ್ ಓ ಎಲ್ ಎಸ್ ಹೆಚ್ ಎಸ್ . ಮೂಲದ 81.3 ಮೆ.ವ್ಯಾ ಸಾಮರ್ಥ್ಯದ ವಿದ್ಯುತ್ ಯೋಜನೆಯು ಮೆ: ಟಾಟಾ ವಿದ್ಯುತ್ ಕಂಪನಿಯ ನೇತೃತ್ವದಲ್ಲಿ ಬೆಳಗಾವಿ ಸಮೀಪ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಿದೆ.

ನವದೆಹಲಿ ಮೂಲದ ಇನಾಕ್ಸ್ ಪವರ್ ಸಂಸ್ಥೆಯು ಧಾರವಾಡ ಸಮೀಪ 42.8 ಮೆ.ವ್ಯಾ. ಸಾಮರ್ಥ್ಯದ ವಿದ್ಯುತ್ ಯೋಜನೆಯಿಂದ ಹಿಂದೆ ತೆಗೆದಿದೆ. ಅಲ್ಲದೆ. ಮೆ : ಯುನಿವರ್ಸಲ್ ವಾಟರ್ ಮತ್ತು ಪವರ್ ಲಿಮಿಟೆಡ್. ಸಂಸ್ಥೆಯವತಿಯಿಂದ ಪ್ರಾರಂಭಿಸಲಾಗುವ 110 ಮೆ.ವ್ಯಾ. ಸಾಮರ್ಥ್ಯದ ಕುಮಟಾ ಬಾರ್ಜ್ ಮೌಂಟೆಡ್ ವಿದ್ಯುತ್ ಯೋಜನೆಯು ಯಾವುದೇ ಪ್ರಗತಿಯನ್ನು ಸಾಧಿಸಿರುವುದಿಲ್ಲ. ಅಲ್ಲದೆ, ಇನ್ನೀತರ ಎಲ್ಲಾ ವಿದ್ಯುತ್ ಯೋಜನೆಗಳು ರಾಜ್ಯ ಮತ್ತು ಕೇಂದ್ರ ಸರ್ಕಾರದ ಮಂಜೂರಾತಿ ಪಡೆಯುವ ವಿವಿಧ ಹಂತದಲ್ಲಿವೆ.

ಆ) ಮಂಗಳೂರು ವಿದ್ಯುತ್ ಯೋಜನೆಯ ಪಾಲುದಾರರಲ್ಲಿ ಒಬ್ಬರಾಗಿದ್ದ ಮೆ: ಕೊಜೆಂಟ್ರಿಕ್ಸ್ ಸಂಸ್ಥೆಯು 1013.2 ಮೆ.ವ್ಯಾ. ಸಾಮರ್ಥ್ಯದ ವಿದ್ಯುತ್ ಯೋಜನೆಯನ್ನು ಮಂಗಳೂರು ಸಮೀಪ ಕಾರ್ಯಗತಗೊಳಿಸಬೇಕಾಗಿದ್ದು, ಈ ಸಂಸ್ಥೆಯು ಈ ಯೋಜನೆಯಿಂದ ಹಿಂತೆಗೆದುಕೊಂಡಿದೆ. ಈ ಬಗ್ಗೆ ಸಂಸ್ಥೆಯು ತನಗೆ ಈ ಯೋಜನೆಯಲ್ಲಿ ಮುಂದುವರೆಯಲು ಆಸಕ್ತಿಯಿಲ್ಲವೆಂದು ಈಗಾಗಲೇ ರಾಜ್ಯ ಸರ್ಕಾರಕ್ಕೆ ತಿಳಿಸಿದ್ದು, ಸದರಿ ಸಂಸ್ಥೆಯ ಒಡತನವನ್ನು ಮಾರಿಷಸ್ ಮೂಲದ ಚೈನಾ ಲೈಟ್ ಲಿ. ಸಂಸ್ಥೆಗೆ

ವರ್ಗಾಯಿಸಿರುವುದಾಗಿ ತಿಳಿಸಿದೆ. ಮೆ।। ಸಿ.ಎಲ್.ಪಿ. ಸಂಸ್ಥೆಯು ತನಗೆ ಈ ಯೋಜನೆ ಯನ್ನು ಕಾರ್ಯಗತಗೊಳಿಸಲು ಆಸಕ್ತಿ ಇದೆಯೆಂದು ತಿಳಿಸಿದ್ದು, ಮೆ।। ಟಾಟಾ ಎಲೆಕ್ಟ್ರಿಕ್ ಸಂಸ್ಥೆಯ ಪಾಲುಗಾರಿಕೆಯೊಂದಿಗೆ ಕಾರ್ಯಗತಗೊಳಿಸಲು ಸಿದ್ದರಿದ್ದಾರೆ. ಮೆ ।। ಸಿಎಲ್‌ಪಿ ಸಂಸ್ಥೆಯ ಪ್ರಸ್ತಾವನೆಯು ಕೆ.ಪಿ.ಟಿ.ಸಿ.ಎಲ್.ನ ಪರಿಶೀಲನೆಯಲ್ಲಿದೆ.

ಮೆ।। ಟಾಟಾ ಎಲೆಕ್ಟ್ರಿಕಲ್ ಸಂಸ್ಥೆಯ ಪ್ರಾಯೋಜಕತ್ವವನ್ನು ಅನುಮೋದಿಸುವ ಬಗ್ಗೆ ಕೆಪಿಟಿಸಿಎಲ್ ಸಂಸ್ಥೆಯು ವಿದ್ಯುತ್ ಖರೀದಿ ಒಡಂಬಡಿಕೆಯ ಉಪಬಂಧಗಳ ರೀತಿ ತೀರ್ಮಾನ ತೆಗೆದು ಕೊಳ್ಳಬೇಕಾಗಿದೆ. ಅಲ್ಲದೆ. ಕೇಂದ್ರ ಸರ್ಕಾರವು ಪ್ರತಿಗ್ಯಾರಂಟಿಯಲ್ಲಿ ನಮೂದಿಸಿರುವ ನಿಬಂಧನನ್ವೆಯ ವಿದ್ಯುತ್ ಖರೀದಿ ಒಡಂಬಡಿಕೆಯಲ್ಲಿಮಾಡಬೇಕಾದ ಬದಲಾವಣೆಗಳ ಬಗ್ಗೆ ಸಹ ಕೆಪಿಟಿಸಿಎಲ್ ಸಂಸ್ಥೆಯು ಪರಿಶೀಲಿಸುತ್ತಿದೆ.

ಮೇಲ್ಕಂಡ ವಿಷಯಗಳ ಬಗ್ಗೆ ತೃಪ್ತಿದಾಯಕ ಶರಾವು ಅಂಗೀಕೃತವಾದಲ್ಲಿ, ಈ ಯೋಜನೆಯನ್ನು ತೀವ್ರಗತಿಯಲ್ಲಿ ಅನುಷ್ಠಾನಗೊಳಿಸಲು ರಾಜ್ಯಸರ್ಕಾರವು ಉತ್ಸಾಹಕವಾಗಿದೆ.

ಇ) ರಾಜ್ಯ ಸರ್ಕಾರವು ರಚಿಸಿದ್ದ ಶ್ರೀ ದೀಪಕ್ ಪಾರೇಖಿ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಸ್ವತಂತ್ರ ವಿದ್ಯುತ್ ಉತ್ಪಾದಕರಿಗೆ ಎಸ್ಕ್ರೋ ನೀಡಬಾರದೆಂದು ಮಾಡಲಾಗಿದ್ದ ಹಾಗೂ ಇನ್ನೀತರ ಶಿಫಾರಸ್ಸುಗಳನ್ನು ರಾಜ್ಯ ಸರ್ಕಾರವು ಅಂಗೀಕರಿಸಿದೆ.

ಈ) ಇಲ್ಲ.

ANNEXURE-A

The details of the projects for which Government has given permission.

There are three categories of projects. They are :

I.	Bid route projects -(a)	Small capacity Land based. ...	417.70 MW
		Barge mounted ...	695.00 MW
II.	Mo route projects	...	6662.87 MW
III.	Banking and Wheeling projects	...	260.00 MW
		TOTAL:	**8035.57 MW**

Category : 1- Bid Route projects :

(A) Small capacity Multi-fuel power projects:

1) 42.8 MW Power project near Dharwar - M/s INOX Power Limited, New Delhi.

2)	103 MW Power project near Harihar	-	M/s .Atria Power Corporation, Bangalore.
3)	79.5 MW Power project near Whitefield.	-	Ms.ScintillaPower Ltd., Mumbai.
4)	27.8 MW Power project near Bellary	-	M/s. Rayalaseema Alkalied& Allied Chemicals Ltd., Bangalore.
5)	81.3 MW Power project near Belgaum-		M/s .Tata Electric Company, Mumbai.
6)	32.5 MW Power project near Tumkur	-	M/s. DLF Power Limited, Faridabad.
7)	50.8 MW Power project near Koppal	-	M/s.BharatForhe Limited, Pune.

(B) <u>Barge Mounted Power Projects:</u>

1)	Tanir Bhavi Barge mounted Power project of capacity 220 MW (Naphtha)	-	M/s. Tanir Bhavi Power Company.
2)	Bengre Barge mounted Power project of capacity 170 MW (Naphtha)	-	M/s. Smith Co-generation(India) Pvt. Unlimited.
3)	Mulki-Barge Mounted Power project of capacity 195 MW (Naphtha)	-	M/s. Euro India Power Canara Pvt. Limited.
4)	Kumta Barge mounted Power project of capacity 110 MW (FO/LSHS)	-	M/s. Universal Water & Power Ltd., Canada.

Category: II- MOU Route Projects :

1) Vijayanagar Power Project near Toranagallu, Capacity :500 MW (Coal)-M/s Karnataka Power Corporation Ltd., Bangalore.

2) Raichur Power Project, near Raichur, Capacity :420 MW (Coal)-M/s. Kutub Power Company, Bangalore.

3) Mangalore Power Project, near Nandikur, Capacity :1013.2MW (Coal) - M/s. Mangalore Power Company (M/x. Cogentrix).

4) Nagarjuna Power Project, near Nandikur, Capacity:1015 MW (Coal) - M/s. Nagarjuna Power Corporation, Bangalore.

5) Chamalapur Power Project near Mysore, Capacity:1000MW (Coal) - M/s. Mysore Power Gen. Pvt. Ltd., Bangalore.

6) Almatti Hydel Project (UKP), Capacity :1107MW Hydro Electric Project - M/s. Chamundi Power Corporation, Bangalore.

7) Gokak Power Project near Shivapur in Gokak Taluk, Capacity: 500 MW (LNG) -M/s. Wesco Power Generation Ltd., Bangalore.

8) Bidadi Power Project -I, near Bidadi, Capacity : MW (Naphtha)-M/s. Karnataka Power Corporation Ltd., Bangalore.

9) Peenya Power Project near Kaniminike Village, Bangalore, Capacity :107.6MW (Naphtha) -M/s. Peenya Power Co.(Subhash Projects& Coastal America, USA).

10) Mandya Power Project in Mandya District, Capacity :164.37MW (Naphtha)- M/s. Mandya Power Partners.

11) Hassan Power Project near Hassan, Capacity :189 MW (Naphtha) - M/s. Hassan Power Company, Bangalore.

12) Nanjanagud Power Project near Nanjanagud, Capacity : 96.7 MW (Naphtha) - M/s. IPS Power Company, Bangalore.

13) Bijapur Power Project in Bijapur District, Capacity-350MW (Coal) - M/s. KEI Energy Ltd., Hyderabad.

Category -III-Banking and Wheeling Projects:

Jindal Tractebel Power Project near Tornagallu, Capacity: 260 MW (2 Units x 130 MW) Coal and Corex gas) -M/s. Jindal Tractebel Power Co.

ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಸರತ್ಲಾಪಾಡ ಕೆರೆಯ ಕಾಮಗಾರಿಯ ಬಗ್ಗೆ

1374 (1706) ಶ್ರೀ ಬಸವಂತ ರೆಡ್ಡಿ ಪೋತಕಪಲ್ಲಿ (ಸೇಡಂ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1994-95 ಸಾಲಿನ ಆಯವ್ಯಯದಲ್ಲಿ ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಸಂತ್ಲಾಪಾಡ ಕೆರೆ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಆ) ಹಾಗಿದ್ದಲ್ಲಿ ಕೆರೆಯ ಕಾಮಗಾರಿಯು ಈವರೆಗೂ ಪೂರ್ತಿಯಾಗದಿರುವುದಕ್ಕೆ ಕಾರಣಗಳೇನು :

ಇ) ಈ ಕೆರೆಯ ಅಡಿಪಾಯ ಕೆಲಸ ಭದ್ರವಾಗಿ ಆಗದೇ ವ್ಯವಹಾರವಾಗಿರುವುದು ನಿಜವೇ?

ಈ) ಈ ಕೆರೆಯ ಏರು(ಕಟ್ಟೆ) ಪೂರ್ತಿಯಾಗಿದೆಯೇ, ಈ ಕೆರೆಯ ಏರಿಗೆ ತಗಲಿರುವ ಖರ್ಚು ಎಷ್ಟು ?

ಉ) ಕೆರೆಯ ಕಾಮಗಾರಿಯು ಈಗ ಯಾವ ಹಂತದಲ್ಲಿದೆ.

ಊ) ಕಾಲುವೆಗಳ ಕೆಲಸ ಸ್ಥಗಿತಗೊಂಡಿರುವುದೇಕೆ : ಎರಡೂ ಕಡೆಯ ಕಾಲುವೆಗಳಿಗೆ ಇಲ್ಲಿಯವರೆಗೆ ಖರ್ಚಾಗುವ ಹಣವೆಷ್ಟು; ಅಂತರವೆಷ್ಟು; ಎರಡೂ ಕಡೆ ಕಾಲುವೆಗಳ ಒಟ್ಟು ಉದ್ದದ ಅಂತರವೆಷ್ಟು : ಈ ಕಾಲುವೆಗಳ ಯೋಜನೆಯಲ್ಲಿ ಪರ್ಶಿಗಳು ಹಾಕುವ ಕೆಲಸವಿದೆಯೇ:

ಋ) ಪ್ರಸಕ್ತ ವರ್ಷ ಕಾಲುವೆಗಳ ಕೆಲಸ ಪೂರ್ಣಗೊಳಿಸಿ ರೈತರಿಗೆ ನೀರು ಸರಬರಾಜು ಮಾಡಲಾಗುವುದೇ?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಬಂದಿದೆ.

ಆ) ಸದರಿ ಕೆರೆಯ ನಿರ್ಮಾಣವನ್ನು ಸರ್ಕಾರ ಆದೇಶ ಸಂ:ನೀಇ 70 ಸನೀಗು 97 ಬೆಂಗಳೂರು ದಿನಾಂಕ : 5-3-98ರ ಮೇರೆಗೆ ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ, ಗುಲ್ಬರ್ಗರವರ ದಿನಾಂಕ:20-4-98ರಂದು ವಹಿಸಲಾಗಿದೆ. 98-99ನೇ ಸಾಲಿನಲ್ಲಿ ಅನುದಾನ ಕಡಿಮೆ ಇದ್ದ ಕಾರಣ ಹಾಗೂ ಅತಿ ಮಳೆಯಿಂದ ಆಗಸ್ಟ್ 98ರಿಂದ ನವೆಂಬರ್ 98ರವರೆಗೆ ಸ್ಥಗಿತಗೊಂಡಿರುತ್ತದೆ.